CW.3 PW.3

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ., ಕನಕಪುರ ರವರ ನ್ಯಾಯಾಲಯದಲ್ಲಿ**

# CC No.608/2019

| | |
|---|---|
| ಸಾಕ್ಷಿದಾರರ ಹೆಸರು | ಮನು ಕೆ |
| ಗಂಡನ ಹೆಸರು | ಶಿವಕುಮಾರ |
| ವಯಸ್ಸು | 39 ವರ್ಷ |
| ವೃತ್ತಿ | ಗೃಹಿಣಿ |
| ವಿಳಾಸ | ತಗಡೇಗೌಡನದೊಡ್ಡಿ |
| ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ | 26.03.2026 |

**<u>ಮುಖ್ಯ ವಿಚಾರಣೆ ಎ ಪಿ ಪಿ ರವರಿಂದಃ-</u>**

ಆರೋಪಿ 1 ರಿಂದ 9 ರವರು ಗೊತ್ತಿರುತ್ತಾರೆ. ಈ ದಿನ ನ್ಯಾಯಾಲಯದಲ್ಲಿ 1 ರಿಂದ 3 ಮತ್ತು 6 ರವರು ಹಾಜರಿದ್ದು, 4, 5, 7 ರಿಂದ 9 ರವರು ಗೈರು ಹಾಜರಿದ್ದು ಅವರನ್ನು ಗುರುತಿಸಲು ತಕರಾರು ಇರುವುದಿಲ್ಲ ಎಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ. ಚಾಸಾ-1 ನನ್ನ ಗಂಡ, ಚಾಸಾ-2 ನನ್ನ ಮಾವ, ಚಾಸಾ-4 ನನ್ನ ಅತ್ತೆ, ಚಾಸಾ-5 ಮತ್ತು 6 ರವರು ಗೊತ್ತಿರುವುದಿಲ್ಲ.

ದಿಃ 16.07.2018 ರಂದು 11.30 ಗಂಟೆ ಸಮಯದಲ್ಲಿ ನಾವು ಅಂದರೆ ಚಾಸಾ-1, 2 ಹಾಗೂ 4 ರವರುಗಳು ನಮ್ಮ ತೋಟದಲ್ಲಿ ಕೆಲಸ ಮಾಡಲು ಹೋಗಿದ್ದಾಗ ಆರೋಪಿತರು ನಮ್ಮ ಜಮೀನಿನಲ್ಲಿ ಉಳುಮೆ ಮಾಡುವ ಸಂಬಂಧ ಟ್ರಾಕ್ಟರ್ ತೆಗೆದುಕೊಂಡು ಬಂದಿದ್ದರು. ಚಾಸಾ-1 ರವರು ಆ ಸಮಯದಲ್ಲಿ ಯಾಕೆ ಈ ರೀತಿ ಉಳುಮೆ ಮಾಡುತ್ತಿದ್ದೀರಾ ಎಂದು ಕೇಳಿದಾಗ ಸೂಳೇ ಮಗನೇ ಬೋಳಿ ಮಗನೇ ನಿಮ್ಮ ಅಪ್ಪನದಾ ಜಮೀನು ಎಂದು 1 ರಿಂದ 4ನೇ ಆರೋಪಿತರು ಗುಂಪು ಕಟ್ಟಿಕೊಂಡು

ಹೇಳಿರುತ್ತಾರೆ. 2 ಮತ್ತು 3ನೇ ಆರೋಪಿತರು ದೊಣ್ಣೆಯನ್ನು ತೆಗೆದುಕೊಂಡು ಬಂದು ಚಾಸಾ-1 ರವರಿಗೆ ಕೈ ಹಾಗೂ ಭುಜದ ಮೇಲೆ ಹೊಡೆದಿರುತ್ತಾರೆ

ಆ ಸಮಯದಲ್ಲಿ ಚಾಸಾ-2 ರವರು ಹೋಗಿ ಸದರಿ ಆರೋಪಿತರಿಂದ ದೊಣ್ಣೆಯನ್ನು ಕಿತ್ತುಕೊಳ್ಳುತ್ತಾರೆ. ಆ ಸಮಯದಲ್ಲಿ 2, 4 ಮತ್ತು 6ನೇ ಆರೋಪಿತರು ನನ್ನ ಮಾವನಿಗೆ ಕೆನ್ನೆ ಹಾಗೂ ತೊಡೆಯ ಮೇಲೆ ಹೊಡೆಯುತ್ತಾರೆ. ನಂತರ 1 ರಿಂದ 6ನೇ ಆರೋಪಿತರು ಚಾಸಾ-1 ಮತ್ತು 2 ರವರನ್ನು ಕೆಳಗೆ ತಳ್ಳಿ ತುಳಿದಿರುತ್ತಾರೆ. ಆ ಸಮಯದಲ್ಲಿ ನಾನು ಹಾಗೂ ಚಾಸಾ-4 ರವರು ಅಲ್ಲಿಗೆ ಹೋಗಿ ನಿಲ್ಲಿಸಲು ಪ್ರಯತ್ನ ಮಾಡಿದಾಗ 7 ರಿಂದ 9 ನೇ ಆರೋಪಿತರು ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದಿರುತ್ತಾರೆ. ನಂತರ ಚಾಸಾ-1 ಮತ್ತು 2 ರವರಿಗೆ ಗಾಯಗಳಾಗಿದ್ದು ಅವರು ಸರ್ಕಾರಿ ಆಸ್ಪತ್ರೆ ಕನಕಪುರದಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಾನು ಈ ಸಂಬಂಧ ಪೋಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಈಗ ನ್ಯಾಯಾಲಯದ ಮುಂದೆ ಹಾಜರು ಪಡಿಸಿರುವ 2 ದೊಣ್ಣೆಗಳನ್ನು ತೋರಿಸಿದ್ದು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಮು.ಮ-1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿದೆ.

**ವಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ**

ಆರೋಪಿತರ ಹಾಗೂ ನಮ್ಮ ಜಮೀನು ಅಕ್ಕಪಕ್ಕದಲ್ಲಿದೆ ಎಂದರೆ ಸರಿ. ಆರೋಪಿತರದ್ದು ಸರ್ವೆ ನಂ.82 ವಿಸ್ತೀರ್ಣ 3 ಎಕರೆ ಎಂದರೆ ಸರಿ. ನಮ್ಮ ಸರ್ವೆ ನಂ.85/4 ಆಗಿದ್ದು 3ವರೆ ಎಕರೆ ವಿಸ್ತೀರ್ಣವಿರುತ್ತದೆ. ಅದು ನನ್ನ ಮಾವನ ಹೆಸರಿನಲ್ಲಿರುತ್ತದೆ. ಈ ಸಂಬಂಧ ಪಹಣಿಯನ್ನು ಪೋಲೀಸರಿಗೆ ಕೊಟ್ಟಿರುತ್ತೇವಾ ಇಲ್ಲವೋ ನನಗೆ ಗೊತ್ತಿಲ್ಲ. ನಮಗೂ ಹಾಗೂ ಆರೋಪಿತರಿಗೂ ಜಮೀನಿನಲ್ಲಿ ಓಡಾಡುವ ದಾರಿಯ ಸಂಬಂಧ ವೈಶಾಮ್ಯವಿದೆ ಎಂದರೆ ಸರಿಯಲ್ಲ. ತಗಡೇಗೌಡನದೊಡ್ಡಿಯಿಂದ ನಮ್ಮ ಜಮೀನಿಗೆ ನಕಾಶೆ ದಾರಿ ಇದೆ ಎಂದರೆ ಸರಿ ಆರೋಪಿತರ ಜಮೀನಿನಲ್ಲಿ ಯಾವುದೇ ನಕಾಶೆ ದಾರಿ

ಇರುವುದಿಲ್ಲ ಎಂದರೆ ನನಗೆ ಗೊತ್ತಿಲ್ಲ. ಆರೋಪಿತರ ಜಮೀನಿನಲ್ಲಿ ನಕಾಶೆ ದಾರಿ ಇಲ್ಲದಿದ್ದರೂಸ ಹಿತ ಅವರ ಜಮೀನಿನಲ್ಲಿ ದಾರಿ ಮಾಡುವ ಸಂಬಂಧ ಚಾಸಾ-1 ಮತ್ತು 2 ರವರು ಹಲವಾರು ಬಾರಿ ಪ್ರಯತ್ನ ಮಾಡಿದ್ದಾರೆಂದರೆ ಸರಿಯಲ್ಲ. ಅದಕ್ಕೆ ಪ್ರಯತ್ನ ಪಟ್ಟಾಗ ಆರೋಪಿತರು ಅವಕಾಶ ಕೊಟ್ಟಿರುವುದಿಲ್ಲ ಇದೆಲ್ಲಾ ಗೊತ್ತಿದ್ದರೂ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೇವಲ ದಾರಿ ಬಿಡಿಸಿಕೊಳ್ಳುವ ಸಂಬಂಧ ಈ ರೀತಿ ಸುಳ್ಳು ದೂರು ಕೊಟ್ಟರೆ ಆರೋಪಿತರು ದಾರಿ ಬಿಡಬಹುದು ಎಂಬ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಆರೋಪಿತರು ನಮ್ಮ ಜಮೀನಿನಲ್ಲಿ ಟ್ರಾಕ್ಟರ್ ಮುಖಾಂತರ ಉಳುಮೆ ಮಾಡಲು ಬಂದಿದ್ದರು. ಟ್ರಾಕ್ಟರ್ ಯಾರಿಗೆ ಸೇರಿರುತ್ತದೆಂದು ಗೊತ್ತಿಲ್ಲ. ಯಾರು ಚಾಲನೆ ಮಾಡುತ್ತಿದ್ದರು ಎಂದು ಆತನ ಹೆಸರು ಗೊತ್ತಿಲ್ಲ. ಅದರ ಸಂಖ್ಯೆ ಗೊತ್ತಿಲ್ಲ. ಟ್ರಾಕ್ಟರ್ ನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುವುದಿಲ್ಲ. 1ನೇ ಆರೋಪಿ ದೊಣ್ಣೆಯಿಂದ ಚಾಸಾ-1 ರವರಿಗೆ ಭುಜಕ್ಕೆ ಹಾಗೂ ಕೈಗೆ ಹೊಡೆದು ಚಾಸಾ-2 ರವರ ಎಡತೊಡೆಯ ಮೇಲೆ ಹಾಗೂ ಭುಜದ ಮೇಲೆ ಹೊಡೆದಿರುತ್ತಾರೆ. 2ನೇ ಆರೋಪಿಯು ಅದೇ ರೀತಿಯಲ್ಲಿ ದೊಣ್ಣೆಯಿಂದ ಅದೇ ಜಾಗದಲ್ಲಿ ಹೊಡೆದಿರುತ್ತಾನೆ. 3 ಮತ್ತು 4ನೇ ಆರೋಪಿತರು ಹಲ್ಲೆ ಮಾಡಿರುವುದಿಲ್ಲ ಆದರೆ ಬೈಯುತ್ತಿದ್ದರು. 5 ಮತ್ತು 6ನೇ ಆರೋಪಿತರು ವಸ್ತುವಿನಿಂದ ಹೊಡೆದಿರುವುದಿಲ್ಲ ಆದರೆ ಕಾಲಿಂದ ಒದ್ದಿರುತ್ತಾರೆ. ಉಳಿದವರು ನಮ್ಮಗಳನ್ನು ಬೈದಿರುತ್ತಾರೆ.

ಆರೋಪಿತರು ಎಂದಿಗೂ ನಮ್ಮ ಜಮೀನಿಗೆ ಉಳುಮೆ ಮಾಡಲು ಬಂದಿರುವುದಿಲ್ಲ ಹಲ್ಲೆ ಮಾಡಿ ಅವಾಚ್ಯ ಶಬ್ದಗಳಿಂದ ಬೈದು ತೊಂದರೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ 1 ಮತ್ತು 2ನೇ ಆರೋಪಿತರು ಚಾಸಾ-1 ಮತ್ತು 2 ರವರಿಗೆ ದೊಣ್ಣೆಯಿಂದ ಹೊಡೆದು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿಯಲ್ಲ. ಸದರಿ ದೊಣ್ಣೆ 3 ಅಡಿ ಉದ್ದ ಇತ್ತು. ಸಾಮಾನ್ಯವಾಗಿ ಮು.ಮ-1 ಮತ್ತು 2 ಹಳ್ಳಿಯಲ್ಲಿ ಎಲ್ಲಾ ಕಡೆ ಸಿಗುತ್ತವೆಂದರೆ ಸರಿ. ಆರೋಪಿತರು ತುರುಬೇವು ಹಾಗೂ ದೊಣ್ಣೆಯಿಂದ ಹೊಡೆದಿರುವುದಿಲ್ಲ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ಮತ್ತು 2 ರವರು ಅದೇ ದಿನ ಕನಕಪುರ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆ. ಒಳರೋಗಿಯಾಗಿ ಹೋಗಿರುವುದಿಲ್ಲ ಕೇವಲ ತೋರಿಸಿಕೊಂಡು ಬಂದಿರುತ್ತಾರೆ. ನಾನು ಈ ಸಂಬಂಧ ಸುಳ್ಳು ಸಾಕ್ಷೆ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಕೇವಲ ಪ್ರಕರಣಕ್ಕೆ ಅನುಕೂಲವಾಗಲಿ ಎಂದು ವೈದ್ಯರ ಜೊತೆ ಶಾಮೀಲಾಗಿ ಸುಳ್ಳು ದಾಖಲೆ ಸೃಷ್ಟಿ ಮಾಡಿರುತ್ತೇನೆಂದರೆ ಸರಿಯಲ್ಲ. ಚಾಸಾ-1 ರವರ ಕಿವಿಯಲ್ಲಿ ರಕ್ತ ಬರುತ್ತಿತ್ತು ಆದರೆ ಬಟ್ಟೆಯಲ್ಲಿ ಕಲೆಯಾಗಿರುವುದಿಲ್ಲ. ನಾನು ಈ ಸಂಬಂಧ ಪೋಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರು ಗಲಾಟೆಯಾದ 18 ದಿನಗಳ ನಂತರ ದೂರನ್ನು ಕೊಟ್ಟಿರುತ್ತಾರೆ. ಅಲ್ಲಿ ಆರೋಪಿತರು ಯಾವುದೇ ತೊಂದರೆ ಮಾಡಿಲ್ಲ, ಅವರು ಮಾಡಿದ್ದೆ ಆದ್ದಲ್ಲಿ ಅವತ್ತೆ ದೂರು ಕೊಡಬೇಕಾಗಿತ್ತು ಎಂದರೆ ಸರಿಯಲ್ಲ. ಕೇವಲ ದಾರಿ ಬಿಡಲಿ ಎಂಬ ಕಾರಣಕ್ಕೆ ಸುಳ್ಳು ದೂರು ಕೊಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ಚಾಸಾ-2 ರವರ ಕೆನ್ನೆಗೆ ಹಾಗೂ ತೊಡೆಗೆ ಆರೋಪಿತರು ಯಾವುದೇ ಹಲ್ಲೆ ಮಾಡಿ ತೊಂದರೆ ಪಡಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಮತ್ತು 2 ರವರನ್ನು ಆರೋಪಿತರು ಕೆಳಗೆ ತಳ್ಳಿ ತುಳಿದಿರುವುದಾಗಿ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ನಾನು ಹೇಳಿರುವಂತೆ ಯಾವುದೆ ತೊಂದರೆ ಅಥವಾ ಹಲ್ಲೆ ಮಾಡದೇ ಇದ್ದರೂ ಸಹಿತ ಅವರ ವಿರುದ್ದ ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

**ಓ ಹೇ ಕೇ ಸರಿ ಇದೆ**

**ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,**

**ಕನಕಪುರ .**